ಕಣ್ಣಾವಲಿನಲ್ಲಿ ದೇವರ ಕುಟುಂಬ ಬೆಳೆಯಿತು.

ಹುಡುಗರು ಕೆರೆಯಲ್ಲಿ ತುಂಬಿದ ಹೂಳಿನಿಂದ ಸತ್ತ ಕಾರಣಕ್ಕಾಗಿ ಲಂಕೆಪ್ಪನವರು ಎಂಎಲ್‌ಎ ಮತ್ತು ಅಧಿಕಾರಿಗಳನ್ನು ಗದರಿಸಿ ಕೆರೆಯ ಹೂಳು ತೆಗೆಸಿದ್ದರು. ದೇವರ ಕುಟುಂಬ ಕೆರೆಯ ಕೆಲಸದಿಂದಾಗಿ ಜಂಗಮಹಳ್ಳಿಯಲ್ಲಿ ತಳವೂರಲು ಕಾರಣವಾಯಿತು. ಕೆಂಪಮ್ಮನ ದೇವಸ್ಥಾನದ ಪಕ್ಕದಲ್ಲೇ ಬಿದಿರ ತಟಿಗೆಗಳಿಂದ ಒಂದು ಜೋಪಡಿ ಕಟ್ಟಿಕೊಂಡು ಬದುಕತೊಡಗಿದರು. ಜಂಗಮಹಳ್ಳಿಗೆ ಬಂದ ಎರಡುಮೂರು ವರ್ಷಗಳಲ್ಲಿ ದೇವರ ತಂದೆತಾಯಿಗಳಿಬ್ಬರೂ ತಿಂಗಳ ಅಂತರದಲ್ಲಿ ಅದ್ಯಾವುದೋ ಅರ್ಥವಾಗದ ಕಾಯಿಲೆಗೆ ತುತ್ತಾದರು. ಅಲೆಮಾರಿಗಳಾದ ದಕ್ಕಲರ ನೆಲೆಗೊಳ್ಳುವ ಆಸೆಯಿಂದ ದೇವರ ಅಪ್ಪಅವ್ವ ಪ್ರಾಣ ಬಿಡಬೇಕಾಯಿತು ಎಂದು ಸುತ್ತಮುತ್ತಲಿನ ಹಳ್ಳಿಗಳು ಮಾತಾಡಿಕೊಂಡವು. ಆದರೆ, ದೇವರಿಗೆ ಇದಕ್ಕೆಲ್ಲಾ ತಲೆ ಕೆಡಿಸಿಕೊಳ್ಳುವ ಅವಕಾಶವೇ ಇರಲಿಲ್ಲ. 'ಇನ್ನೂ ಸಣ್ಣುಡುಗ ಇಲ್ಲೇ ಒಂದಿಷ್ಟು ಬದುಕು ಕಟ್ಕೊಳ್ಳಿ... ತಬ್ಬಲಿಯಾಗೇ ಬದುಕೋಕೆ ಬಿಟ್ರೆ ನಮ್ಮೂರಿಗೆ ಒಳ್ಳೇದಾಗಲ್ಲ; ನಿಮ್ಮ ಕೆಲಸಗಳನ್ನ ಮಾಡಿ ಕೊಡ್ತಾನೆ ದೊಡ್ ಮನಸ್ಸು ಮಾಡಿ ಜೊತೆಗಿಟ್ಕಳಿ, ನಿಮಗೂ ಕೈಗೆ ಬತ್ತನೆ' ಅಂತ ಲಂಕೆಪ್ಪನವರು ಹೇಳಿದ ಮಾತನ್ನು ತೆಗೆದುಹಾಕಲಾಗದೆ ಭರಮಪ್ಪಗೌಡರು ಒಳ್ಳೆಯವರಾದರು. ದೇವರು ಬೆಳೆಯುತ್ತಾ ಇದೇ ಲಂಕೆಪ್ಪನವರು ಭರಮಪ್ಪ ಗೌಡರಿಗೆ 'ಸಂತೆತೋಪಿನ ಹತ್ರ ಇರೋ ಕೆಳಗಿನ ತುಂಡ ತಕ್ಕಲು ಬಿದ್ದೋಗದೆ; ಹೆಂಗೂ ದೇವರು ಒಳ್ಳೆ ಕೆಲಸಗಾರ. ಆ ತುಂಡದಲ್ಲಿ ರಾಗಿ ಗೀಗಿ ಬೆಳ್ಕಂಡು ಜೀವನ ಮಾಡ್ಲಿ; ನಿಮ್ಮ ಪಾಲು ನೀವ್ ತಗಂಡ್ ಬುಡಿ...' ಅಂದಾಗ ಅವರು ಬೇಡ ಅನ್ನಲಿಲ್ಲ.

ಗೌಡರಿಗೆ ಲಂಕೆಪ್ಪನವರ ನಾಯಕತ್ವದ ಬಗ್ಗೆ ಒಳಗೇ ಸಂಕಟವಿದ್ದರೂ ನಾಲ್ಕು ಜನರ ಮುಂದೆ ಅದನ್ನು ತೋರಿಸಿಕೊಳ್ಳುತ್ತಿರಲಿಲ್ಲ. ಭರಮಪ್ಪ ಗೌಡರ ಬಲಗೈ ಬಂಟನ ಹಾಗಿದ್ದ ದೇವರು ಪಾಳುಬಿದ್ದಿದ್ದ ಕೆಳಗಿನ

